ಕಾಟಿಪಳ್ಳ ಮತ್ತು ಕುಳಾಯಿ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಸೌಲಭ್ಯಗಳು

1239 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಕಾಟಿಪಳ್ಳ ಮತ್ತು ಕುಳಾಯಿ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಸೌಲಭ್ಯ ಒದಗಿಸಲು ಪೂರಕವಾದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ನವ ಮಂಗಳೂರು ಬಂದರು ಮತ್ತು ಎಂ.ಸಿ.ಎಫ್.ನಂತಹ ಪ್ರಮುಖ ಯೋಜನೆಗಳಿಗಾಗಿ ಜಾಗ ತೆರವು ಮಾಡಿರುವ ಮೇಲ್ಕಂಡ ಪ್ರದೇಶದ ಜನರ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ 1988-89, 1989-90 1990-91 (ಜನವರಿ 31) ರವರೆಗೆ ಖರ್ಚು ಮಾಡಿದ ಹಣವೆಷ್ಟು?*

ಇ) *ಮೇಲ್ಕಂಡ ಪ್ರದೇಶಗಳ ಅಭಿವೃದ್ಧಿಗೆ ರೂ. 31 ಲಕ್ಷ ಬಿಡುಗಡೆ ಮಾಡುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು 1989ರಲ್ಲಿಯೇ ಪ್ರಸ್ತಾವನೆ ಕಳಿಸಿದ್ದರೂ ಈವರೆಗೆ ಏಕೆ ಹಣ ಬಿಡುಗಡೆಯಾಗಿರುವುದಿಲ್ಲ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಈ ಅವಧಿಯಲ್ಲಿ ಸರ್ಕಾರದ ವತಿಯಿಂದ ಯಾವ ಹಣವನ್ನು ಖರ್ಚು ಮಾಡಿರುವುದಿಲ್ಲ.

ಇ) ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು ಪರಿಗಣಿಸಲಾಗುವುದು.

ಕೊಂಕಣ ರೈಲ್ವೆ ಯೋಜನೆಗೆ ರಾಜ್ಯ ಸರ್ಕಾರ ಮಾಡಲಿರುವ ಖರ್ಚು

1249 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಂಕಣ ರೈಲ್ವೆ ನಿರ್ಮಾಣ ಯೋಜನೆಗಾಗಿ ರಾಜ್ಯ ಸರ್ಕಾರ ಖರ್ಚು ಮಾಡಲಿರುವ ಹಣದ ಮೊತ್ತವೆಷ್ಟು?*

ಆ) *ಈ ಮೊತ್ತದಲ್ಲಿ ಹಣಕಾಸು ರೂಪದ ಸಹಾಯ, ಭೂಸ್ವಾಧೀನ ಮುಂತಾದುವುಗಳಿಗಾಗಿ ಖರ್ಚು ಮಾಡಲಿರುವ ಹಣವೆಷ್ಟು?*

ಇ) *ಕೊಂಕಣ ರೈಲ್ವೆ ಕಾರ್ಪೊರೇಷನ್ ಆಡಳಿತ ಮಂಡಳಿಯಲ್ಲಿ ರಾಜ್ಯ ಸರ್ಕಾರದ ಪ್ರತಿನಿಧಿ ಯಾರಾಗಿರುತ್ತಾರೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರಾಜ್ಯ ಸರ್ಕಾರದ ವತಿಯಿಂದ ಷೇರು ಬಂಡವಾಳವಲ್ಲದೆ ಬೇರೆ ಯಾವ ಹಣವನ್ನು ಖರ್ಚು ಮಾಡುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು

ತಹಶೀಲ್ದಾರ್‌ರವರ ವಸತಿ ಸೌಲಭ್ಯಗಳ ಬಗ್ಗೆ

1250 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) *ರಾಜ್ಯದಲ್ಲಿರುವ ತಹಶೀಲ್ದಾರರವರಿಗೆ ಸರ್ಕಾರಿ ವಸತಿ ಸೌಕರ್ಯವಿರುವವರೆಷ್ಟು? ಹಾಗೂ ಸೌಕರ್ಯವಿಲ್ಲದಿರುವ ತಹಶೀಲ್ದಾರರ ಸಂಖ್ಯೆ ಎಷ್ಟು?*

ಆ) ವಸತಿ ಸೌಕರ್ಯವಿಲ್ಲದವರಿಗೆ ಈ ಸೌಲಭ್ಯ ಒದಗಿಸಲು ಸರ್ಕಾರದವರು ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ವಸತಿ ಸೌಕರ್ಯ ಇರುವವರು 87.

ವಸತಿ ಸೌಕರ್ಯ ಇಲ್ಲದಿರುವವರು 88.

ಆ) ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಹಂತ ಹಂತವಾಗಿ ವಸತಿ ಸೌಕರ್ಯ ಒದಗಿಸಲು ಪ್ರಯತ್ನಿಸಲಾಗುವುದು.

ಹೌಸಿಂಗ್ ಬೋರ್ಡ್ ಸಾಲದ ಬಡ್ಡಿ ದರ

1252 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೌಸಿಂಗ್ ಬೋರ್ಡ್‌ನವರು ಮಂಜೂರು ಮಾಡುವ ಮನೆಗಳಿಗೆ ತಗಲುವ ಒಟ್ಟು ಹಣದ ಮೇಲೆ ಶೇಕಡ ಎಷ್ಟು ಬಡ್ಡಿಯನ್ನು ವಿಧಿಸಲಾಗುವುದು?

ಆ) ಸಕಾಲದಲ್ಲಿ ಕಂತಿನ ಪಾವತಿ ಮಾಡದವರ ಮೇಲೆ ಹಾಗೂ ಹಣ ಕಟ್ಟದ ಡಿಫಾಲ್ಟರ್‌ಗಳ ಮೇಲೆ ಶೇಕಡ ಎಷ್ಟು ಚಕ್ರ ಬಡ್ಡಿ ವಿಧಿಸಲಾಗುವುದು

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ರೂ. 15,000ವರೆಗೆ ಶೇ 7.5

ರೂ. 15,000ರಿಂದ 20,000ವರೆಗೆ ಶೇ.9

ರೂ. 20,000 ರಿಂದ 30,000ವರೆಗೆ ಶೇ.9.5

ರೂ. 30,000 ರಿಂದ 60,000 ವರೆಗೆ ಶೇ.11.5

ರೂ. 60,000 ರಿಂದ 1,00,000 ವರೆಗೆ ಶೇ.13

ರೂ. 1,00,000 ರಿಂದ 2,50,000 ವರೆಗೆ ಶೇ.14

ರೂ. 2,50,000 ರಿಂದ ಮೇಲ್ಪಟ್ಟು ಶೇ.16

ಆ) ಸಕಾಲದಲ್ಲಿ ಕಂತಿನ ಪಾವತಿ ಮಾಡದವರ ಮೇಲೆ ಹಾಗೂ ಹಣ ಕಟ್ಟದ ಡಿಫಾಲ್ಟರ್‌ಗಳ ಮೇಲೆ ಶೇ 3 ರಷ್ಟು ಚಕ್ರ ಬಡ್ಡಿ ವಿಧಿಸಲಾಗುವುದು.

ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ದರಖಾಸ್ತು ಜಮೀನು

1251 - ಶ್ರೀ ಎನ್.ಜಿ. ನಾಯಕ್, (ಮೊಳಕಾಲ್ಮೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ ದರಖಾಸ್ತು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು?

ಆ) ಅವರಲ್ಲಿ ಹರಿಜನ-ಗಿರಿಜನರ ಸಂಖ್ಯೆ ಎಷ್ಟು?

ಇ) ಸರ್ಕಾರದವರು ಸದರಿ ಹರಿಜನ-ಗಿರಿಜನರಿಗೆ ಜಮೀನನ್ನು ಮಂಜೂರು ಮಾಡುವರೇ?

ಈ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ - 91 ಜನರು, ಚಳ್ಳಕೆರೆ ತಾಲ್ಲೂಕಿನಲ್ಲಿ-1428 ಜನರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.